ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 3, Nov-Dec 2020, 94-99
©IIMRD, Mysuru
IIMRD JOURNALS
www.iimrd.com

# ಸೋಲಿಗ ಬುಡಕಟ್ಟು ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳು: ಒಂದು ಸಮಾಜಶಾಸ್ತ್ರೀಯ ಅಧ್ಯಯನ

ಡಾ.ಸುರೇಶ.ಸಿ[1]

## ಪೀಠಿಕೆ

ಭಾರತದಾದ್ಯಂತ ಹಲವು ಆದಿವಾಸಿ ಸಮುದಾಯಗಳು ಇವೆ, ಅವುಗಳೆಲ್ಲವು ತಮ್ಮದೆ ಆದ ನಿರ್ದಿಷ್ಟ ಪ್ರದೇಶಗಳಲ್ಲಿ ನೆಲೆಸಿ ಅವರವರದೆಯಾದ ಸಂಪ್ರದಾಯ ಆಚರಣೆಗಳ ಮೂಲಕ ತಮ್ಮನ್ನ ತಾವು ಪ್ರತಿಬಿಬಿಸುತ್ತಿವೆ. ಅಂತವುಗಳಲ್ಲಿ ಸೋಲಿಗ ಸಮುದಾಯವು ಒಂದು. ಇವರು ಕರ್ನಾಟಕದ ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನೆಲೆಸಿದ್ದಾರೆ. ಸೋಲಿಗ ಸಮುದಾಯದಲ್ಲಿ ಐದು ಗುಂಪುಗಳಿದ್ದು, ಇಪ್ಪತ್ತು ಸಾವಿರಕ್ಕೂ ಅಧಿಕ ಸಂಖ್ಯೆಯನ್ನು ಹೊಂದಿರುವವರಾಗಿದ್ದಾರೆ. ಸೋಲಿಗ ಮಹಿಳೆಯರು ಸಮಾಜದ ತಳಹಂತದ ಸ್ಥಾನಮಾನವನ್ನು ಹೊಂದಿರುವವರಲ್ಲಿ ಒಬ್ಬರಾಗಿದ್ದಾರೆ. ಕುಟುಂಬದಲ್ಲಿಯೂ ಪುರಷರ ಅದೀನದಲ್ಲಿಯೇ ಇರುವವರಾಗಿದ್ದಾರೆ. ಪಸ್ತುತ ದಿನಗಳಲ್ಲಿ ಸಾಮಾಜಿಕ ಸ್ತರವಿನ್ಯಾಸದ ಪರಿವರ್ತನೆಗೆ ಒಳಗಾಗಿರುವುದನ್ನು ಕಾಣಬಹುದಾಗಿದೆ. ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ ಸೋಲಿಗ ಮಹಿಳೆಯರಿಗೆ ಸ್ವ–ಉದ್ಯೋಗ ತರಬೇತಿ ನೀಡಿ ಸ್ವಾವಲಂಬಿಗಳಾಗುವಲ್ಲಿ ಅವಿರತ ಪ್ರಯತ್ನ ಮಾಡಿರುವುದನ್ನು ಮರೆಯಲಾಗುವುದಿಲ್ಲ. ಸೋಲಿಗ ಮಹಿಳೆಯರ ಅಧ್ಯಯನವು ಪ್ರಮುಖವಾಗಿ ಸೋಲಿಗ ಮಹಿಳೆಯರ ಸಾಮಾಜಿಕ ಹಿನ್ನೆಲೆಯನ್ನು ಸಮಾಜಶಾಸ್ತ್ರೀಯ ದೃಷ್ಟಿಕೋನದಲ್ಲಿ ನೋಡುವುದಾಗಿದೆ. ಸೋಲಿಗ ಮಹಿಳೆಯರು ಸಮಾಜದ ಹಂಚಿನ ಗುಂಪಿಗೆ ಸೇರಿರುವವರಾಗಿರುವುದರಿಂದ ಅವರ ಅಧ್ಯಯನವು ಸಮಾಜಶಾಸ್ತ್ರೀಯ ಅಧ್ಯಯನದ ಉದ್ದೇಶವನ್ನು ಹೊಂದಿದೆ.

ಆದಿವಾಸಿ ಸಮುದಾಯದವರನ್ನು ಬುಡಕಟ್ಟು ಸಮುದಾಯದವರು ಎಂದು ಸಹ ಕರೆಯಲಾಗುತ್ತದೆ. ಬುಡಕಟ್ಟು ಎನ್ನುವುದಕ್ಕೆ ಆಂಗ್ಲಭಾಷೆಯಲ್ಲಿ ಟ್ರೈಬ್ಸ್ ಎಂದು ಕರೆಯಲಾಗುವುದು. ಆಂಗ್ಲಭಾಷೆಯ ಟ್ರೈಬ್ಸ್ ಪದವು ಲ್ಯಾಟೀನ್ ಭಾಷೆಯ ಟ್ರೈಬಸ್ ಎಂಬ ಪದದಿಂದ ಉತ್ಪತ್ತಿಯಾಗಿದೆ. ಈ ಪದದ ಅರ್ಥ ಪ್ರಾಚೀನ ರೋಮ್ ಜನತೆ ರಾಜಕೀಯ ಭಾಗ ಅಥವಾ ಆಡಳಿತ ಪ್ರಾಂತ ಅಥವಾ ಮಂಡಲ ಕಾಲಗತಿಯಲ್ಲಿ ಈ ಪದವನ್ನು ಸಮುದಾಯವಾಗಿ ರೂಪ ತಳೆಯುವ ಕುಟುಂಬಗಳ ಸಂಕಲನ ಎಂಬುದಾಗಿ ಪಾಶ್ಚಿಮಾತ್ಯ ಮಾನವಶಾಸ್ತ್ರಜ್ಞರು ಹಾಗೂ ಸಮಾಜಶಾಸ್ತ್ರಜ್ಞರು ಅರ್ಥೈಸಿದ್ದಾರೆ. ಮೂಲತಃ ಟ್ರೈಬ್ಸ್ ಅಥವಾ ಪರಿಶಿಷ್ಟ ಪಂಗಡಗಳು ಎಂಬ ಪದವು ಆಡಳಿತಾತ್ಮಕ ಅನುಕೂಲತೆಗಾಗಿ ಪರಿಚಯಿಸಿದೆ.

[1] *ಸಹಾಯಕ ಪ್ರಾಧ್ಯಾಪಕರು, ಸ್ನಾತ್ತಕೋತ್ತರ ಸಮಾಜಶಾಸ್ತ್ರ ಅಧ್ಯಯನ ವಿಭಾಗ, ಸರ್ಕಾರಿ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜು– ಸ್ವಾಯತ್ತ, ಹಾಸನ.*

ಸೋಲಿಗ ಸಮುದಾಯದವರು ಬಿಳಿಗಿರಿರಂಗನ ಬೆಟ್ಟದ ಅರಣ್ಯ ಪ್ರದೇಶದಲ್ಲಿ ವಾಸಿಸುವವರಾಗಿದ್ದಾರೆ. ಈ ಸಮುದಾಯದ ಮಹಿಳೆಯರು ಅವರದೆ ಸಂಸ್ಕೃತಿ ಸಂಪ್ರದಾಯ ಆಚರಣೆಯಲ್ಲಿ ಜೀವಿಸುವವರಾಗಿದ್ದಾರೆ ಹಾಗೂ ಒಂದು ಸಂಪ್ರದಾಯ ಪ್ರಕಾರ ವಧು–ವರರು ಪರಸ್ಪರ ಆಯ್ಕೆ ಮಾಡಿಕೊಳ್ಳುವುದಕ್ಕೆ ಅವರದೆಯಾದ ಒಂದು ಪದ್ಧತಿಯನ್ನು ಅನುಸರಣೆ ಮಾಡುವರು. ಸೋಲಿಗ ಸಮುದಾಯದವರು ಹಬ್ಬ ಹಾಗೂ ಇತರೆ ಸಂದರ್ಭದಲ್ಲಿ ಮಹಿಳೆಯರೊಂದಿಗೆ ಪುರುಷರು ನೃತ್ಯ ಮಾಡುತ್ತಾರೆ. ಆ ಸಂದರ್ಭದಲ್ಲಿ ಮಹಿಳೆಯರು ಇಷ್ಟ ಪಡುವ ವ್ಯಕ್ತಿಗೆ ಕಲ್ಲುಗಳನ್ನು ಎಸೆಯುತ್ತಾರೆ ಹಾಗೂ ಆ ವ್ಯಕ್ತಿಯನ್ನು ಮದುವೆಯಾಗಲು ಕೇಳಿಕೊಳ್ಳುವರು ಮತ್ತು ಅವರುಗಳು ಪೋಡು ಬಿಟ್ಟು ಓಡಿ ಹೋಗುವರು ಅವರು ಮರುದಿನ ಹಿಂದಿರುಗಿದಾಗ ಸೋಲಿಗ ಸಮುದಾಯದಂತೆ ಹನ್ನೆರಡು ರೂಪಾಯಿ ನೀಡಿ ಸಮುದಾಯ ಸೇರಿಕೊಳ್ಳುವರು.

ಸೋಲಿಗ ಬುಡಕಟ್ಟು ಸಮುದಾಯದಲ್ಲಿ ರಕ್ತಸಂಬಂಧ ಬಹಳ ಮುಖ್ಯವಾದ ಅಂಶ. ಇವರಲ್ಲಿ ತುಂಬ ಕಟ್ಟುನಿಟ್ಟಿನ ಕ್ರಮಗಳ ಆಚರಣೆಯಲ್ಲಿವೆ ಹಾಗೂ ಆಕಾರದಲ್ಲಿ ಗುಂಗುರು ಕೂದಲು, ಕುರುಚಲು ಗಡ್ಡ, ಕುಳ್ಳನೆಯ ದೇಹ, ದಪ್ಪತುಟಿ, ಅಗಲಮುಖ ಹೊಂದಿರುವವರಾಗಿದ್ದಾರೆ. ಸೋಲಿಗರ ಮೂಲದ ಬಗ್ಗೆ ಸ್ಪಷ್ಟ ನಿಲುವುಗಳಿಲ್ಲವಾದರೂ ಪುರಾಣದ ಪ್ರಕಾರ ಪಾರ್ವತಿ ಪರಮೇಶ್ವರರು ತಮ್ಮ ಬೆವರಿನಿಂದ ಎರಡು ಗೊಂಬೆಗಳನ್ನು ಮಾಡಿ ಅದಕ್ಕೆ ಜೀವ ತುಂಬಿದಾಗ, ಅವುಗಳಲ್ಲಿ ಒಂದು ನೀಲಯ್ಯ ಮತ್ತೊಂದು ಸಂಕಮ್ಮನಾಯಿತು. ನೀಲಯ್ಯನೆ ಸೋಲಿಗರ ಮೂಲ ಪುರುಷರೆಂದು ಹೇಳುತ್ತಾರೆ. ಕಾಲಾನಂತರದಲ್ಲಿ ಸೋಲಿಗರಿಗೆ ಒಬ್ಬ ರಾಜನಿದ್ದ ಅವನು ಶತೃರಾಜನ ವಿರುದ್ಧ ಯುದ್ಧ ಮಾಡುವಾಗ ಸೋತು ಜೀವರಕ್ಷಣೆಗಾಗಿ ತನ್ನ ಸೈನ್ಯದೊಂದಿಗೆ ಕಾಡಿಗೆ ಓಡಿಹೋದ. ಕಾಡಿನಲ್ಲಿ ಆಹಾರಕ್ಕಾಗಿ ಸೋಲನ ಹಂಬಿನ ಗಡ್ಡೆಯನ್ನು ತಿಂದು ಜೀವನ ಮಾಡುತ್ತಿದ್ದರು ಸೋಲನ ಹಂಬಿನ ಗಡ್ಡೆ ಎಷ್ಟು ತಿಂದರು ಮತ್ತೆ ಮತ್ತೆ ಚಿಗುರಿ ಇಡೀ ಸೈನ್ಯಕ್ಕೆ ಆಹಾರವನ್ನು ಒದಗಿಸುತ್ತಿತ್ತು. ಇವರು ಜೀವನೋಪಾಯಕ್ಕಾಗಿ ಸೋಲನ ಹಂಬನ್ನು ಆಶ್ರಯಿಸಿದುದರಿಂದ ಇವರನ್ನು ಸೋಲಿಗರೆಂದು ಕರೆಯಲಾಯಿತು ಎನ್ನಬಹುದಾಗಿದೆ. ಸೋಲಿಗರಲ್ಲಿ ಐದು ಕುಲಗಳಿವೆ ಅವುಗಳೆಂದರೆ ಉರಾಳಿ ಸೋಲಿಗ, ಮಲೆ ಸೋಲಿಗ, ಕಾಡು ಸೋಲಿಗ, ಉರುಬತ್ತಿ ಸೋಲಿಗ ಹಾಗೂ ಬುರುಡೆ ಸೋಲಿಗ. ಇವರು ಕಾಡಿನಲ್ಲಿ ಜೇನು ಹಳಿದು, ಕಾಡಂಚಿನ ಗ್ರಾಮ ಮತ್ತು ಇತರೆ ಪ್ರದೇಶಗಳಿಗೆ ಮಾರಾಟ ಮಾಡಿ ಜೀವನ ಸಾಗಿಸುತ್ತಿದ್ದಾರೆ.

**ಅಧ್ಯಯನದ ಪ್ರಾಮುಖ್ಯತೆ**

ಮಹಿಳೆಯರ ಸ್ಥಿತಿಗತಿಗಳ ಅಧ್ಯಯನಗಳು ಹಲವು ಕ್ಷೇತ್ರಗಳಲ್ಲಿ ನಡೆಯುತ್ತಿದ್ದರೂ ಇನ್ನೂ ಅಧ್ಯಯನವಾಗಬೇಕಾಗಿರುವ ಅನೇಕ ಕ್ಷೇತ್ರಗಳು ಉಳಿದಿವೆ. ಮಹಿಳೆಯರ ಅದರಲ್ಲಿಯು ಬುಡಕಟ್ಟು ಮಹಿಳೆಯರ ಕುರಿತಂತೆ ಅಧ್ಯಯನಗಳು ನಡೆಯಬೇಕಿದೆ. ಸೋಲಿಗ ಬುಡಕಟ್ಟು ಮಹಿಳೆಯರ ಜೀವನ, ವಾಸಸ್ಥಳ, ವೈವಾಹಿಕ ಸ್ಥಾನ, ಶಿಕ್ಷಣ ಮುಂತಾದ ಅಂಶಗಳಲ್ಲಿ ಸಮಸ್ಯೆಗಳನ್ನು ಎದುರಿಸುತ್ತಿರುವುದನ್ನು ನಾವು ಕಾಣಬಹುದಾಗಿದೆ. ಇವರುಗಳ ಸಮಸ್ಯೆಗಳನ್ನು ಪತ್ತೆಹಚ್ಚಿ ಅವುಗಳಿಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಪ್ರಸ್ತುತ ಅಧ್ಯಯನವು ಸಹಕಾರಿಯಾಗಲಿದೆ.

**ಅಧ್ಯಯನದ ಉದ್ದೇಶಗಳು**

- ಸೋಲಿಗ ಮಹಿಳೆಯರ ಕೌಟುಂಬಿಕ ಹಿನ್ನೆಲೆ ತಿಳಿಯುವುದು.
- ಸೋಲಿಗ ಮಹಿಳೆಯರ ಸಾಮಾಜಿಕ ಪರಿಸ್ಥಿತಿಯನ್ನು ಅಧ್ಯಯನ ಮಾಡುವುದು.
- ಸೋಲಿಗ ಮಹಿಳೆಯರ ಆರ್ಥಿಕ ಹಿನ್ನೆಲೆಯ ಪರಿವರ್ತನೆಯ ಕಾರಣ ತಿಳಿಯುವುದು.

**ಅಧ್ಯಯನ ಕ್ಷೇತ್ರ**

ಪ್ರಸ್ತುತ ಅಧ್ಯಯನಕ್ಕೆ ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲೂಕನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. 2011ರ ಜನಗಣತಿಯ ಪ್ರಕಾರ ಯಳಂದೂರು ತಾಲ್ಲೂಕಿನ ಜನಸಂಖ್ಯೆ ಒಟ್ಟು 73, 290 ಇದ್ದು ಇದರಲ್ಲಿ ಪುರುಷರು 36,787 ಹಾಗೂ ಮಹಿಳೆಯರು 36,503 ಇದ್ದಾರೆ. ಇದರಲ್ಲಿ ಸೋಲಿಗರ ಸಂಖ್ಯಾ ಪ್ರಮಾಣ 20,000ದಷ್ಟು ಇದೆ, ಸಾಕ್ಷರತೆ ಶೇ 11.11% ಇದೆ.

**ಮಾದರಿ ವಿಧಾನ**

ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲ್ಲೂಕಿನ ಬಿಳಿಗಿರಿರಂಗನ ಬೆಟ್ಟದಲ್ಲಿ ನೆಲೆಸಿರುವ 50 ಬುಡಕಟ್ಟು ಮಹಿಳೆಯರನ್ನು ಸರಳ ಯಾದೃಚ್ಛಿಕ ಮಾದರಿ ವಿಧಾನದಿಂದ ಆಯ್ಕೆ ಮಾಡಿಕೊಂಡು ಸಂದರ್ಶನ ಅನುಸೂಚಿ ಸಹಾಯದಿಂದ ಮಾಹಿತಿ ಸಂಗ್ರಹಿಸಲಾಗಿದೆ.

**ಸೋಲಿಗ ಮಹಿಳೆಯರ ಸಾಮಾಜಿಕ ಸ್ಥಿತಿಗತಿಗಳ ವಿಶ್ಲೇಷಣೆ**

ಸೋಲಿಗ ಕುಟುಂಬದಲ್ಲಿ ಪುರುಷರು ಕುಟುಂಬದ ನಿರ್ವಹಣೆ ಮತ್ತು ಜವಾಬ್ದಾರಿಯನ್ನು ಹೊಂದಿರುವವರಾಗಿದ್ದಾರೆ. ಪುರುಷರಿಗಿರುವಷ್ಟು ಸ್ಥಾನಮಾನ ಮಹಿಳೆಯರಿಗೆ ಇಲ್ಲದೆ ಇರುವುದು ಕಂಡುಬರುತ್ತದೆ. ಕುಟುಂಬದ ಕೆಲಸಗಳ ಹೆಚ್ಚಿನ ಭಾಗದ ನಿರ್ವಹಣೆಯನ್ನು ಪುರುಷರು ಮಾಡುವವರಾಗಿದ್ದಾರೆ. ಮಹಿಳೆಯರು ಮನೆ ಕೆಲಸ ಮತ್ತು ಸಣ್ಣ ಪುಟ್ಟ ಕೃಷಿ ಕೆಲಸ ಹಾಗೂ ಕಾಡಿನ ಗಿಡಮೂಲಿಕೆಗಳನ್ನು ತಂದು ಅವುಗಳನ್ನು ಮಾರಾಟ ಮಾಡುವ ಕೆಲಸವನ್ನು ಮಾಡುವವರು ಸಹ ಇದ್ದಾರೆ. ಒಟ್ಟು ಪ್ರತಿವರ್ತಿಗಳಲ್ಲಿ ಕುಟುಂಬದಲ್ಲಿ ಮಹಿಳೆಯರ ಸ್ಥಾನಮಾನ ಉತ್ತಮವಾಗಿದೆ ಎಂದು ಶೇ.32 ರಷ್ಟು, ಸಾಧಾರಣವಾಗಿದೆ ಎಂದು ಶೇ.42. ರಷ್ಟು, ಉತ್ತಮವಾಗಿಲ್ಲ ಎಂದು ಶೇ.26 ಮಹಿಳೆಯರು ತಿಳಿಸಿರುವುದು ಸೋಲಿಗ ಬುಡಕಟ್ಟು ಸಮುದಾಯದ ಕುಟುಂಬದಲ್ಲಿ ಮಹಿಳಯರ ಸ್ಥಾನಮಾನ ಇನ್ನು ಇತರೆ ಸಮುದಾಯಗಳ ಕುಟುಂಬಗಳಿಗಿಂತ ಕೆಳಮಟ್ಟದಲ್ಲಿದೆ ಎನ್ನುವುದು ಕಂಡುಬರುತ್ತದೆ.

**ಸೋಲಿಗ ಮಹಿಳೆಯರ ಶೈಕ್ಷಣಿಕ ಸ್ಥಿತಿ**

ಸೋಲಿಗ ಮಹಿಳೆಯರು ಶೈಕ್ಷಣಿಕವಾಗಿ ಹಿಂದುಳಿದಿರುವವರಾಗಿದ್ದಾರೆ, ಇವರುಗಳು ಬೆಟ್ಟ ಪ್ರದೇಶಗಳಲ್ಲಿ ವಾಸಮಾಡುವವರಾಗಿರುವುದರಿಂದ ಗ್ರಾಮ ಮತ್ತು ನಾಗರಿಕ ಸಮುದಾಯಗಳಿಗಿಂತ ಬಿನ್ನವಾದ ಬುಡಕಟ್ಟು ಪ್ರದೇಶಗಳಲ್ಲಿ ಶೈಕ್ಷಣಿಕ ಆಸಕ್ತಿಗಿಂತ ಜೀವನಾವಶ್ಯಕತೆಗೆ ಹೆಚ್ಚಿನ ಪ್ರಾಮುಖ್ಯತೆ ಕೊಡುವುದರಿಂದ ಶಿಕ್ಷಣ ಅವರಿಗೆ ಇಲ್ಲದಾಗಿರುವುದನ್ನು ಕಾಣಬಹುದು ಹಾಗೂ ಪುರುಷ ಪ್ರಧಾನ

ಸಮಾಜ ಪದ್ಧತಿಯ ಆಚರಣೆ ಇರುವುದರಿಂದ ಮಹಿಳೆಯರಿಗೆ ಶೈಕ್ಷಣಿಕ ಅವಕಾಶಗಳಿಂದ ವಂಚಿತರಾಗಿರುವುದನ್ನು ಕಾಣಬಹುದು. ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರದ ಪ್ರಯತ್ನದ ಫಲವಾಗಿ ಇತ್ತೀಚಿಗೆ ಸುಧಾರಣೆಯಾಗುತ್ತಿರುವುದನ್ನು ಕಾಣಬಹುದಾಗಿದೆ. ಒಟ್ಟು ಪ್ರತಿವರ್ತಿಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪಡೆದುಕೊಂಡಿರುವವರು ಶೇ. 16 ರಷ್ಟು, ಪ್ರೌಢಶಿಕ್ಷಣ ಪಡೆದುಕೊಂಡಿರುವವರು ಶೇ.18.ರಷ್ಟು, ಪದವಿಪೂರ್ವ ಶಿಕ್ಷಣವನ್ನು ಪಡೆದುಕೊಂಡಿರುವವರು ಶೇ.12 ರಷ್ಟು, ಪದವಿ ಶಿಕ್ಷಣವನ್ನು ಪಡೆದುಕೊಂಡಿರುವವರು ಶೇ. 2 ರಷ್ಟು, ಅನಕ್ಷರಸ್ಥರ ಪ್ರಮಾಣ ಶೇ. 52 ರಷ್ಟು ಇರುವುದನ್ನು ಕಾಣಬಹುದಾಗಿದೆ ಪ್ರಾರಂಬಿಕ ಹಂತದಲ್ಲಿ ಯಾವುದೇ ಶಿಕ್ಷಣವನ್ನು ಪಡೆಯದೆ ಇರುವವರು ಇಂದು ಶೈಕ್ಷಣಿಕೆ ಪರಿವರ್ತನೆಯ ಸಣ್ಣ ಬದಲಾವಣೆಯನ್ನು ಕಾಣಬಹುದಾಗಿದೆ.

**ಸೋಲಿಗ ಮಹಿಳೆಯರ ವೈವಾಹಿಕ ಸ್ಥಿತಿ**

ಸೋಲಿಗ ಮಹಿಳೆಯರ ವೈವಾಹಿಕ ಸ್ಥಾನಮಾನವನ್ನು ನೋಡುವುದಾದರೆ ಒಟ್ಟು ಪ್ರತಿವರ್ತಿಗಳಲ್ಲಿ ವಿವಾಹಿತರು ಶೇ. 62 ರಷ್ಟು, ಅವಿವಾಹಿತರು ಶೇ. 38. ರಷ್ಟು ಇದ್ದಾರೆ. ಪ್ರಸ್ತುತ ಸಂದರ್ಭದಲ್ಲಿ ವೈವಾಹಿಕ ಜೀವನ ಸಾಧಾರಣ ಮಟ್ಟದಲ್ಲಿರುವುದು ಅಧ್ಯಯನದಿಂದ ತಿಳಿದುಬರುತ್ತದೆ. ವಧು ವರರು ಪರಸ್ಪರ ತಮ್ಮ ಸಂಗಾತಿಗಳನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಸಾಕಷ್ಟು ಸ್ವಾತಂತ್ರ್ಯವನ್ನು ಹೊಂದಿರುವುದು ಕಂಡುಬರುತ್ತದೆ.

**ಸೋಲಿಗ ಮಹಿಳೆಯರಲ್ಲಿ ಆರ್ಥಿಕ ಸ್ಥಿತಿ**

ಸೋಲಿಗ ಬುಡಕಟ್ಟು ಸಮುದಾಯದಲ್ಲಿ ಮಹಿಳೆಯರು ಕೃಷಿ ಕೆಲಸ, ಜೇನು ಹಳಿಯುವುದು, ಗಿಡಮೂಲಿಕೆಗಳನ್ನು ಕಾಡುಗಳಿಂದ ಸಂಗ್ರಹಿಸಿ ಮಾರಾಟ ಮಾಡಿ ಜೀವನ ಸಾಗಿಸುವವರಾಗಿರುವುದರಿಂದ ಆರ್ಥಿಕವಾಗಿ ಹಿಂದುಳಿದಿರುವವರಾಗಿದ್ದಾರೆ. ಇತ್ತೀಚಿನ ದಿನಗಳಲ್ಲಿ ಸರ್ಕಾರದ ಯೋಜನೆಗಳು ಮತ್ತು ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರದ ಅವಿರತ ಪ್ರಯತ್ನದಿಂದ ಸುಧಾರಣೆಯಾಗುತ್ತಿರುವುದನ್ನು ಕಾಣಬಹುದು. ಒಟ್ಟು ಪ್ರತಿವರ್ತಿಗಳಲ್ಲಿ ವಾರ್ಷಿಕ ಆದಾಯ 1,000 ದಿಂದು 10,000 ಎಂದು ಶೇ. 08 ರಷ್ಟು, 10,000 ದಿಂದ 20,000 ಎಂದು ಶೇ. 52 ರಷ್ಟು ಹಾಗೂ 20,000ಕ್ಕೂ ಮೇಲ್ಪಟ್ಟು ಎಂದು ಶೇ. 36 ರಷ್ಟು ಎಂದು ಹೇಳಿರುವುದು ಅಧ್ಯಯನದಿಂದ ತಿಳಿದುಬಂದಿದೆ. ಈ ಅಂಕಿ ಅಂಶಗಳನ್ನು ನೋಡಿದಾಗ ಸೋಲಿಗ ಮಹಿಳೆಯರು ಆರ್ಥಿಕ ಸಂಕಷ್ಟದಲ್ಲಿರುವುದು ಕಂಡುಬರುತ್ತದೆ.

**ಸೋಲಿಗ ಮಹಿಳೆಯರ ಸಾಂಪ್ರದಾಯಿಕ ಸಾಮಾಜಿಕ ರಚನೆ**

ಸೋಲಿಗ ಬುಡಕಟ್ಟು ಮಹಿಳೆಯರು ಸಾಮಾಜಿಕವಾಗಿ ರಕ್ತಸಂಬಂಧಿ ಆಧಾರಿತ ಒಗ್ಗಟ್ಟನ್ನು ಹೊಂದಿರುವವರಾಗಿದ್ದು ಸಮುದಾಯದ ಇತರೆ ಎಲ್ಲರೊಂದಿಗೆ ಸಹಮತದ ಭಾವನೆಯನ್ನು ಹೊಂದಿರುವವರಾಗಿದ್ದಾರೆ. ಇಲ್ಲಿ ಪುರುಷ ಪ್ರಧಾನ ಕುಟುಂಬವು ಆಚರಣೆಯಲ್ಲಿರುವುದು ಕಂಡುಬರುತ್ತದೆ. ಪ್ರತಿಯೊಂದು ಕುಟುಂಬದ ವಂಶಾವಳಿಯನ್ನು ನೋಡಿದಾಗ ಮೂರು ನಾಲ್ಕು ತಲೆಮಾರಿನ ಜನರು ಒಟ್ಟಿಗೆ ಜೀವನ ಮಾಡುತ್ತಿರುವುದು ಇವರ ಸಾಮಾಜಿಕ ರಚನೆಯು ಬಲಿಷ್ಟತೆಯನ್ನು ತೋರಿಸುತ್ತದೆ. ಮಗುವಿನ ಜನನದ ಸಂದರ್ಭದಲ್ಲಿ ಹನ್ನೆರಡನೆ ದಿನ ಮಗುವನ್ನು ಆಶೀರ್ವದಿಸಲು ಹನ್ನೆರಡು

ಹಿರಿಯರನ್ನು ಮನೆಗೆ ಆಹ್ವಾನಿಸಲಾಗುತ್ತದೆ. ವಿವಾಹದ ಸಂದರ್ಭದಲ್ಲಿ ವರನ ಹನ್ನೆರಡು ಸಂಬಂಧಿಕರು ವಧುವನ್ನು ಕರೆತರುತ್ತಾರೆ. ವಿವಾಹದ ಚಪ್ಪರವು ಹನ್ನೆರಡು ಹಂತಗಳನ್ನು ಹೊಂದಿದೆ. ವರನ ಪೋಷಕರು ವಧುವಿನ ತಂದೆಗೆ ಹನ್ನೆರಡು ರೂಪಾಯಿ ಪಾವತಿಸಿ, ಹನ್ನೆರಡು ಅನಾಸ್ ಮೌಲ್ಯದ ತಾಳಿಯನ್ನು ಹನ್ನೆರಡು ಸುತ್ತಿನಲ್ಲಿ ವಧುವಿನ ಕೊರಳಿಗೆ ಕಟ್ಟಲಾಗುತ್ತದೆ. ಸಾವಿನ ಸಂದರ್ಭದಲ್ಲಿ ದೇಹವನ್ನು ಹನ್ನೆರಡು ಬಿದಿರಿನ ಬೊಂಬಿನಿಂದ ಮಾಡಿದ ಚಟ್ಟದ ಮೇಲೆ ಹೊತ್ತು ಕೊಳ್ಳಲಾಗುತ್ತದೆ ಮತ್ತು ಸಾವಿನ ಸೂತಕದ ಶೋಕವು ಹನ್ನೆರಡು ದಿನಗಳವರೆಗೆ ಇರುತ್ತದೆ. ಈ ಅಂಶಗಳನ್ನು ನೋಡಿದಾಗ ಎಲ್ಲಾ ಪ್ರತಿವರ್ತಿಗಳಲ್ಲಿ ಈ ಆಚರಣೆಗಳನ್ನು ಒಪ್ಪಿಕೊಂಡಿರುವುದು ಅಧ್ಯಯನದಿಂದ ವ್ಯಕ್ತವಾಗಿದೆ.

**ಸಂಶೋಧನೆಯಲ್ಲಿ ವ್ಯಕ್ತವಾದ ಅಂಶಗಳು**

- ಸೋಲಿಗ ಮಹಿಳೆಯರ ಕೌಟುಂಬಿಕ ಜವಾಬ್ದಾರಿ ಮತ್ತು ತೀರ್ಮಾನಗಳಲ್ಲಿ ಸುಧಾರಣೆಯಾಗುತ್ತಿರುವುದು.
- ಸೋಲಿಗ ಮಹಿಳೆಯರ ಮೇಲೆ ಶೈಕ್ಷಣಿಕ ಪರಿವರ್ತನೆಯ ಪರಿಸರ ಸೃಷ್ಟಿಯಾಗಿರುವುದು.
- ಆರ್ಥಿಕವಾಗಿ ಹಿಂದುಳಿದಿದ್ದು ತಮ್ಮ ಗಿಡಮೂಲಿಕೆ, ಜೇನು ಹಾಗೂ ಗೃಹೋಪಯೋಗಿ ಉಪಕರಣಗಳಿಗೆ ಹೆಚ್ಚಿನ ಬೇಡಿಕೆ ಹಾಗೂ ಮಾರುಕಟ್ಟೆಯ ಕೊರತೆ ಇರುವುದು.
- ಸೋಲಿಗ ಮಹಿಳೆಯರು ಸಾಂಪ್ರದಾಯಿಕ ಆಚರಣೆಯ ಹಿನ್ನೆಲೆಯಲ್ಲಿಯೇ ಜೀವನ ಮಾಡುತ್ತಿರುವುದು.

**ಸೋಲಿಗ ಮಹಿಳೆಯರ ಅಭಿವೃದ್ಧಿಗೆ ಸಲಹೆಗಳು**

- ಸೋಲಿಗ ಮಹಿಳೆಯರಿಗೆ ಸರ್ಕಾರದಿಂದ ಲಭ್ಯವಿರುವ ಯೋಜನೆಗಳ ಸೌಲಭ್ಯಗಳನ್ನು ತಿಳಿಸುವುದು.
- ಸೋಲಿಗ ಮಹಿಳೆಯರಿಗೆ ಸ್ವ–ಸಹಾಯ ಗುಂಪುಗಳ ಪ್ರಯೋಜನವನ್ನು ಪಡೆದುಕೊಳ್ಳುವುದಕ್ಕೆ ಉತ್ತೇಜಿಸುವುದು.
- ಸೋಲಿಗ ಮಹಿಳೆಯರಿಗೆ ಸ್ವ–ಉದ್ಯೋಗ ತರಬೇತಿ ನೀಡುವುದು ಹಾಗೂ ಮಾರುಕಟ್ಟೆ ವ್ಯವಸ್ಥೆಯನ್ನು ಒದಗಿಸುವುದು.
- ಸೋಲಿಗ ಮಹಿಳೆಯರಿಗೆ ಶಿಕ್ಷಣವನ್ನು ಕೊಡಿಸುವುದು.

**ಉಪಸಂಹಾರ**

ಸೋಲಿಗ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳು ಇತರರಿಗೆ ಹೋಲಿಸಿದಾಗ ಕೆಳಹಂತದಲ್ಲಿವೆ ಎನ್ನುವುದನ್ನು ಸೂಚಿಸುತ್ತದೆ. ಸೋಲಿಗ ಮಹಿಳೆಯರು ಕುಟುಂಬದಲ್ಲಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ಆರ್ಥಿಕ ದೃಷ್ಟಿಕೋನದ ಹಿನ್ನೆಲೆಯಲ್ಲಿ ನಾಗರಿಕ ಸಮಾಜಗಳ ಮಹಿಳೆಯರಿಗಿಂತ ಹಿಂದುಳಿದ ಸ್ಥಾನಮಾನವನ್ನು ಸಮಾಜದಲ್ಲಿ ಹೊಂದಿದ್ದಾರೆ ಎನ್ನುವುದು ಅಧ್ಯಯನದಿಂದ ಕಂಡುಬಂದಿದೆ.

ಸರ್ಕಾರ ಮತ್ತು ಸಂಘ ಸಂಸ್ಥೆಗಳು ಇವರು ಸಮಾಜದ ಮುಖ್ಯವಾಹಿನಿಗೆ ಬರುವುದಕ್ಕೆ ಪೂರಕ ಪರಿಸರವನ್ನು ಕಲ್ಪಿಸಬೇಕು ಎನ್ನುವುದು ಅಧ್ಯಯನದಿಂದ ವ್ಯಕ್ತವಾಗಿದೆ.

**ಪರಾಮರ್ಶನ ಗ್ರಂಥಗಳು**


- ಅನಂತ ಕೃಷ್ಣ ಅಯ್ಯರ್. ಎಲ್. ಕೆ. (1931). ಮೈಸೂರ್ ಕ್ಯಾಸ್ಟ್ ಅಂಡ್ ಟ್ರೈಬ್ಸ್. ಮಿತ್ತಲ್ ಪಬ್ಲಿಕೇಷನ್ಸ್, ಸಂಪುಟ 4.
- ಎಡ್ಗರ್ ಥರ್ಸ್ಟನ್ ಮತ್ತು ಕೆ.ರಂಗಾಚಾರಿ. (1909). ಕ್ಯಾಸ್ಟ್ ಅಂಡ್ ಟ್ರೈಬ್ಸ್ ಇನ್ ಸದರನ್ ಇಂಡಿಯಾ. ಸಂ–6, ಮದ್ರಾಸ್ ಗವರ್ನಮೆಂಟ್ ಪ್ರೆಸ್, ಮದ್ರಾಸ್.
- ಘುರ್ಯೆ.ಜಿ.ಎಸ್. (1959). ದ ಶೆಡ್ಯೂಲ್ಡ್ ಟ್ರೈಬ್ಸ್. ಪಾಪುಲರ್ ಪ್ರೆಸ್, ಬಾಂಬೆ.
- ನಂಜುಂಡಯ್ಯ ಹೆಚ್, ವಿ ಅಯ್ಯರ್ (1928). ದ ಮೈಸೂರ್ ಟ್ರೈಬ್ಸ್ ಅಂಡ್ ಕ್ಯಾಸ್ಟ್, ಮೈಸೂರು ಗವರ್ನಮೆಂಟ್ ಪ್ರೆಸ್, ಮೈಸೂರು.